ತ್ತಲೇ ಅವರ ಮನಸ್ಸು ಅಖಂಡದಲ್ಲಿ ಲೀನವಾಗಿರುತ್ತಿತ್ತು. ಹಾಗೆಯೇ ಮಹಾರಾಜರ ಮನಸ್ಸೂ ಕೂಡ. ಅವರ ದೃಷ್ಟಿ ಯಾವಾಗಲೂ ಶ್ರೀರಾಮಕೃಷ್ಣರ ಶಬ್ದಗಳಲ್ಲಿ ಹೇಳುವುದಾದರೆ 'ಹಕ್ಕಿ ಮೊಟ್ಟೆಗಳಿಗೆ ಕಾವು ಕೊಡಲು ಕುಳಿತಂತೆ' ಅಂತರ್ಮುಖಿಯಾಗಿರುತ್ತಿತ್ತು. ಅವರು ಹೆಚ್ಚಿನ ಸಲ ಭಾವಲೀನರಾಗಿ ಮೌನವಾಗಿಯೇ ಕುಳಿತಿರುತ್ತಿದ್ದರು. ಸುತ್ತ ಭಕ್ತರು ಕುಳಿತದ್ದರೂ ಅರ್ಧ ಗಂಟೆ ಕಳೆದರೂ ಯಾವ ಮಾತೂ ಇಲ್ಲ. ಆದರೆ ಅವರ ಸಾನ್ನಿಧ್ಯ ಮಾತ್ರದಿಂದ ಇತರರ ಮನಸ್ಸುಗಳು ಮೇಲಕ್ಕೆ ಎತ್ತಲ್ಪಟ್ಟಿರುತ್ತಿದ್ದವು.

ಒಮ್ಮೆ ಸ್ವಾಮಿ ಆತ್ಮಾನಂದರು ಮಹಾರಾಜರಿಗೆ ಕೆಲ ಪ್ರಶ್ನೆಗಳನ್ನು ಕೇಳಿದರು. ಮಹಾರಾಜ್ ಅವರಿಗೆ ಉತ್ತರಿಸುತ್ತ ''ಅಖಂಡ ಬ್ರಹ್ಮ ಮತ್ತು ವ್ಯಕ್ತ ಜಗತ್ತಿನ ನಡುವೆ ಒಂದು ಕ್ಷೀಣವಾದ ಗಾಜಿನ ಪರದೆ ಅಡ್ಡ ಇರುವುದನ್ನು ನಾನು ನೋಡುತ್ತಿದ್ದೇನೆ. ಕೆಲವೊಮ್ಮೆ ನನಗೆ ಅದನ್ನು ಹರಿದು ಹಾಕಿ ಅಖಂಡದಲ್ಲಿ ಲೀನವಾಗಬೇಕೆನ್ನಿಸುತ್ತದೆ. ಆದರೆ ಹಾಗೆ ಮಾಡದಿರುವಂತೆ ಶ್ರೀರಾಮಕೃಷ್ಣರು ತಡೆಯುತ್ತಿದ್ದಾರೆ'' ಎಂದರು. ಇವೆಲ್ಲ ಏನದ್ಭುತ ಮಾತುಗಳು! ಅವುಗಳ ಅರ್ಥವಾದರೂ ನಮಗೆ ಆಗುತ್ತದೆಯೇ! ಹಾಗಾದರೆ ಅವರ ಆಧ್ಯಾತ್ಮಿಕ ಸಿದ್ಧಿ ಯಾವ ಮಟ್ಟದ್ದಾಗಿತ್ತು!

ಒಂದು ಸಲ ಇಬ್ಬರು ತ್ಯಾಗಿಗಳು ಶ್ರೀರಾಮಕೃಷ್ಣರ ಶಿಷ್ಯೆಯಾದ ಗೋಪಾಲೇರ್ ಮಾ ಅವರಿಗೆ ಆದ ಶ್ರೀಕೃಷ್ಣನ ದರ್ಶನದ ಅನುಭವಗಳನ್ನು ಕುರಿತು ಚರ್ಚಿಸುತ್ತಿದ್ದರು. ''ಶ್ರೀಕೃಷ್ಣ ಅವಳೊಂದಿಗೆ ಮಾತನಾಡಿದ, ಆಟವಾಡಿದ, ತಿನ್ನಲು ಬೆಣ್ಣೆ ಕೊಡು ಎಂದು ಹಠ ಮಾಡಿದ, ಅವಳ ತೊಡೆಯೇರಿದ, ಮಲಗಿದ – ಇವೆಲ್ಲ ಅತೀಂದ್ರಿಯ ಸ್ತರಕ್ಕೆ ಸೇರಿದ ಅನುಭವಗಳು. ಶ್ರೀಕೃಷ್ಣ ಅವಳ ಚರ್ಮ ಚಕ್ಷುಗಳಿಗೆ ಕಾಣಿಸಿದನು ಎಂಬುದನ್ನು ನಾನು ನಂಬುವುದಿಲ್ಲ'' ಎಂದು ಒಬ್ಬ ಶಿಷ್ಯ ಹೇಳಿದನು. ಹತ್ತಿರದ ತಮ್ಮ ಕೋಣೆಯಲ್ಲಿ ಕುಳಿತಿದ್ದ ಮಹಾರಾಜ್ ಇದನ್ನು ಕೇಳಿಸಿಕೊಂಡರು. ಅವರು ಇವರಿಬ್ಬರ ಬಳಿ ಬಂದು, ''ಓ ಹಾಗಾದರೆ ನೀನು ಸರ್ವಜ್ಞ ಪುರುಷ'' ಎಂದರು. ಶಿಷ್ಯ, ''ಆದರೆ ಮಹಾರಾಜ್, ಬಾಹ್ಯ ಜಗತ್ತಿನಲ್ಲಿ ಭಗವಂತನನ್ನು ನೋಡಲು ಹೇಗೆ ಸಾಧ್ಯ ?'' ಎಂದು ಮರು ಪ್ರಶ್ನಿಸಿದನು. ಮಹಾರಾಜ್ ಅರ್ಥಗರ್ಭಿತವಾಗಿ, ''ಜಡ ಜಗತ್ತು ಮುಕ್ತಾಯವಾಗಿ ಚೇತನದ ಲೋಕ ಪ್ರಾರಂಭವಾಗುವ ಆ ಸೀಮೆಯನ್ನು ನನಗೆ ತೋರಿಸು'' ಎಂದು ನುಡಿದರು. ಏನದ್ಭುತ ವಾಣಿಗಳು! ಆ ಮಾತುಗಳ ಅರ್ಥವನ್ನಾದರೂ ನಾವು ಬಲ್ಲೆವೇನು?

ಒಂದು ಬಾರಿ ಬೃಂದಾವನದಲ್ಲಿದ್ದಾಗ ಅವರ ಹೃದಯದಿಂದ ಉತ್ಕಟ ಭಗವದಾನಂದದದ ಮಹಾಪೂರ ಉಕ್ಕಿ ಹರಿಯಿತು. ಅನಂತ ಆನಂದ, ಅಮಿತ ಶಾಂತಿ ಅವರನ್ನಾವರಿಸಿತು. ಅವರಿಗೆ ತಮ್ಮ ಒಳಹೊರಗುಗಳಲ್ಲಿ ಅಪಾರ ಆನಂದ ಅನುಭವವಾಯಿತು. ಇಡೀ ವಿಶ್ವವೇ ಮಧುಮಯವಾಗಿರುವಂತೆ ಗೋಚರಿಸಿತು. ಕೆಲವು ದಿನಗಳು ಅವರು ಅದೇ ಉಚ್ಚ ಭೂಮಿಕೆಯಲ್ಲಿದ್ದರು.

ಮಹಾರಾಜರ ಭಾವರಾಜ್ಯದ ಇಂತಹ ಅದ್ಭುತ ದೈವೀ ಘಟನೆಗಳನ್ನು ಕೇಳಿದಾಗ ನಮಗೆ ಅಪಾರ ಆನಂದವಾಗುತ್ತದೆ. ನಮ್ಮ ನೈಜ ನೆಲೆ ಅದೇ ಆಗಿದೆ ಎಂಬುದನ್ನದು ಸೂಚಿಸುತ್ತದೆ. ಇವುಗಳ ಸ್ಮರಣ ಮನನದಿಂದ ನಮ್ಮ ಆತ್ಮ ಶುದ್ಧವಾಗುತ್ತದೆ. ಇವುಗಳ ಚಿಂತನೆಯು ಇಂದ್ರಿಯ ಜಗತ್ತು ಸತ್ಯವಲ್ಲ, ಭಗವತ್ ವಸ್ತುವೇ ಸತ್ಯವಾದುದು ಎಂಬ ನಿಶ್ಚಯ ಬುದ್ಧಿಯನ್ನು ತಾಳಲು ನೆರವಾಗುತ್ತದೆ. *


*ಗ್ರಂಥಋಣ:*

*1. The Eternal Companion*

*2. Swami Bramhananda As We Saw Him*


## ನಿಜವಾದ ಭಕ್ತಿ

ಒಂದು ಸಲ ಅರ್ಜುನನಿಗೆ ತನ್ನಷ್ಟು ಪರಿಶುದ್ಧನಾದ ವ್ಯಕ್ತಿ ಬೇರೆ ಯಾರೂ ಇಲ್ಲವೆಂದೂ, ಕೃಷ್ಣನಲ್ಲಿ ತನ್ನಷ್ಟು ಭಕ್ತಿಯನ್ನು ಹೊಂದಿದವರು ಬೇರಾರೂ ಇಲ್ಲವೆಂದೂ ತುಂಬ ಜಂಭವುಂಟಾಯಿತು. ಒಂದು ದಿನ ಅವನು ಒಬ್ಬ ಬ್ರಾಹ್ಮಣ ಭಕ್ತನನ್ನು ಕಂಡ. ಜೀವಿಗಳನ್ನು ಕೊಲ್ಲಬೇಕಾಗುವುದೆಂದು ಅವನು ಬರೀ ಹುಲ್ಲನ್ನು ಮಾತ್ರವೇ ತಿನ್ನುತ್ತಿದ್ದ. ಆದರೆ ಅವನು ತನ್ನ ಬಳಿ ಒಂದು ಹರಿತವಾದ ಆಯುಧವನ್ನು ಹೊಂದಿದ್ದ! ಅರ್ಜುನನಿಗೆ ಆಶ್ಚರ್ಯವಾಯಿತು. ಅವನು ಬ್ರಾಹ್ಮಣನನ್ನು ಕೇಳಿದ : ''ಜೀವಿಗಳ ಹತ್ಯೆಯಾದೀತೆಂದು ಹೆದರಿ ನೀನು ಬರಿ ಹುಲ್ಲನ್ನು ಮಾತ್ರ ತಿನ್ನುವೆ. ಆದರೆ ಇಂಥ ಆಯುಧವನ್ನು ಹೊಂದಿದ್ದೀಯಲ್ಲ? ಇದು ಹೇಗೆ?'' ಅದಕ್ಕೆ ಬ್ರಾಹ್ಮಣ ಹೇಳಿದ: ''ನಾನು ಮೂರು ವ್ಯಕ್ತಿಗಳನ್ನು ಕೊಲ್ಲಬೇಕಾಗಿದೆ. ಮೊದಲನೆಯವನು ಅರ್ಜುನ. ಅವನು ಭಗವಂತನನ್ನು ತನ್ನ ರಥದ ಸಾರಥಿಯನ್ನಾಗಿ ಮಾಡಿದ. ಎರಡನೆಯ ವ್ಯಕ್ತಿ ದ್ರೌಪದಿ. ಅವಳು ಕೃಷ್ಣನನ್ನೇ ಕರೆಯುತ್ತಾ ಅವನು ಊಟ ಮಾಡುವುದಕ್ಕೂ ಬಿಡಲಿಲ್ಲ. ಊಟ ಮಾಡುತ್ತಿದ್ದವನು ಅರ್ಧದಲ್ಲೇ ಬಿಟ್ಟು ಅವಳ ರಕ್ಷಣೆಗಾಗಿ ಓಡಿದ. ಮೂರನೆಯವನು ಪ್ರಹ್ಲಾದ. ಯಾವ ಯಾವಾಗ ತೊಂದರೆಯುಂಟಾಯಿತೋ ಆಗಲೆಲ್ಲ ಭಗವಂತ ಅವನ ಬಳಿಗೆ ಓಡಿ ಹೋಗಬೇಕಾಯಿತು. '' ಅವನು ಹೀಗೆ ಹೇಳುತ್ತಿರಬೇಕಾದರೆ ಭಗವಂತ ಒಣ ಹುಲ್ಲುಗಳ ನಡುವಿನಿಂದ ಕಾಣಿಸಿಕೊಂಡ. ಅರ್ಜುನನ ಜಂಭ ಬಲವಾದ ಹೊಡೆತ ಬಿತ್ತು . ಈ ಕಥೆಯನ್ನು ಹೇಳುತ್ತ ಶ್ರೀರಾಮಕೃಷ್ಣರು ಸಮಾಧಿಸ್ಥರಾಗುತ್ತಿದ್ದರು. ಅವರ ಕಣ್ಣುಗಳಲ್ಲಿ ತುಂಬ ನೀರಿಳಿಯುತ್ತಿತ್ತು .

*'Swami Akhandananda As We Saw Him' ಗ್ರಂಥದಿಂದ*

# ತಾಯಿಯ ಹೃದಯ

ಮೂಲ ಹಿಂದೀ: **ಸ್ವಾಮಿ ಜಪಾನಂದ** ಕನ್ನಡಕ್ಕೆ : **ರೂಪಶ್ರೀ ನಾಗರಾಜ್**



ಮಳೆಗಾಲದ ಸಮಯ, ಭಾದ್ರಪದ ಮಾಸ. ಜೋರಾದ ಗಾಳಿ ಇದ್ದರೂ ಬೆಳಗಿನ ಹೊತ್ತು ಉಷ್ಣತೆ ಇತ್ತು. ಧಾನ್ಯಗಳ ಫಸಲು ಪಕ್ವವಾಗುವ ಕಾಲ ಸನ್ನಿಹಿತವಾಗಿತ್ತು. ನಾಲ್ಕು ದಿಕ್ಕುಗಳಲ್ಲೂ ಹರಡಿಕೊಂಡಿದ್ದ ಹಸಿರು ಹೊಲಗಳು ಅಪೂರ್ವ ಶೋಭೆಯಿಂದ ಮನಸ್ಸನ್ನು ಸೂರೆಗೊಳುತ್ತಿದ್ದವು. ದಂಡೆಗಳು, ಮೈದಾನಗಳು, ವನಗಳು, ಎಲ್ಲವೂ ಹಸಿರು ವಸ್ತ್ರ ಧರಿಸಿಕೊಂಡು ಜಗನ್ನಾಥನ ಮನಕ್ಕೆ ತಂಪೆರೆಯುತ್ತಿವೆಯೇನೋ ಎನ್ನುವಂತಿದ್ದವು. ಎಲ್ಲಿ ನೋಡಿದರೂ ಅನುಪಮ ಸೌಂದರ್ಯದ ಛಾಯೆ ಕಾಣುತ್ತಿತ್ತು. ಆದರೆ ಸೂರ್ಯನ ತಾಪವು ಸಿಕ್ಕಾಪಟ್ಟೆ ಆಗಿ ಮಧ್ಯಾಹ್ನವು ಅಸಹನೀಯವಾಗಿತ್ತು.

ಅದೇ ಸಮಯದಲ್ಲಿ ಒಬ್ಬ ಪರಿವ್ರಾಜಕ ಸಂನ್ಯಾಸಿ ಕಲ್ಕತ್ತಾದಿಂದ ಸ್ವಲ್ಪ ದೂರವಿದ್ದ ಬಂಗಾಲದ ಒಂದು ತೀರ್ಥ ತ್ರಿವೇಣಿಯಿಂದ (ಅದನ್ನು ಮುಕ್ತ ತ್ರಿವೇಣಿ ಎಂದೂ ಕರೆಯುತ್ತಾರೆ) ವರ್ಧಮಾನ ನಗರಕ್ಕೆ ಹೋಗಲು ಪ್ರಾರಂಭಿಸಿದ್ದ. ವರ್ಧಮಾನ ಅಲ್ಲಿಂದ ಸಾಕಷ್ಟು ದೂರವಿತ್ತು, ಹಾಗಾಗಿ ಬೇಗ ಊಟವಾಯಿತು. ಆದರೆ ತ್ರಿವೇಣಿ ನಗರ ಇನ್ನೂ ದಾಟಿರಲಿಲ್ಲ, ಅವನಿಗೆ ಬಿಸಿಲಿನಿಂದಾಗಿ ಬಾಯಾರಿಕೆ ಮತ್ತು ನಿಶ್ಶಕ್ತಿಯಾಗಿ ಚಿಂತೆಗೀಡಾದ. ಒಂದು ಸಣ್ಣ ಹಳೆಯ ಮನೆಯ ಬಾಗಿಲಿನಲ್ಲಿ ಒಬ್ಬ ಪ್ರೌಢ ಹೆಂಗಸು ನಿಂತಿದ್ದಳು. ವಿಧವೆಯಾಗಿದ್ದ ಕಾರಣ ಬಂಗಾಲದ ಸಾಮಾಜಿಕ ಕಟ್ಟಳೆಯಂತೆ ಅಂಚಿಲ್ಲದ ಬಿಳಿ ಸೀರೆಯನ್ನು ಉಟ್ಟಿದ್ದಳು. (ಬಂಗಾಳದ ವಿಧವೆಯರು ಯಾವುದೇ ಅಲಂಕಾರಿಕ ವಸ್ತು, ಆಭರಣಗಳನ್ನು ಧರಿಸುವುದಿಲ್ಲ.) ಪರಿವ್ರಾಜಕನು ಆಕೆಯ ಹತ್ತಿರ ಹೋಗಿ ಕೇಳಿದ, ''ತಾಯಿ, ತುಂಬಾ ಬಾಯಾರಿಕೆ ಆಗುತ್ತಿದೆ, ನೀರು ಕೊಡುತ್ತೀರಾ?''

ಸೌಮ್ಯವಾಗಿ ಅವನತ್ತ ದೃಷ್ಟಿ ಬೀರಿ ಅವಳು ಒಳಗೆ ಹೋದಳು ಮತ್ತು ಒಂದು ಲೋಟದ ಭರ್ತಿ ಸ್ವಚ್ಛ ನೀರನ್ನು ತಂದುಕೊಟ್ಟಳು. ಕೈಯಲ್ಲಿ ಒಂದು ಬೆಲ್ಲದ ತುಂಡನ್ನು ಇಟ್ಟು ಹೇಳಿದಳು, ''ಬರೀ ನೀರನ್ನು ಕೊಡುವುದಿಲ್ಲ. ಈ ಸಮಯದಲ್ಲಿ ಬಹಳ ಬಿಸಿಲಿದೆ, ಈ ಬೆಲ್ಲವನ್ನು ತಿಂದು ನಂತರ ನೀರು ಕುಡಿಯಿರಿ. ನಿಮಗೆ ಭಿಕ್ಷೆ ಸಿಕ್ಕಿದೆಯೆ? ಭಿಕ್ಷೆಯ ಸಮಯವಂತೂ ಮೀರಿ ಹೋಗಿದೆ.. ಈ ಸುಡು ಬಿಸಿಲಿನಲ್ಲಿ ಹೊರಟಿದ್ದೀರಲ್ಲ.. ಈ ಬಿಸಿಲು ತುಂಬಾ ಕೆಟ್ಟ ದಾಗಿದೆ. ಇದರಿಂದ ಜ್ವರ ಬಂದುಬಿಡುತ್ತದೆ. ನಿಮಗೆ ಎಲ್ಲಿಗೆ ಹೋಗಬೇಕು?'' ಸಂನ್ಯಾಸಿ 'ವರ್ಧಮಾನ' ಎಂದು ಹೇಳಿದಾಗ ಅವಳು, ''ಅರೇ ಅದು ತುಂಬಾ ದೂರವಿದೆ. ಆದರೆ ಈ ಬಿಸಿಲು ತುಂಬಾ ಕೆಟ್ಟದಾಗಿದೆ. ಇದ್ದಕ್ಕಿದ್ದಂತೆ ಮಲೇರಿಯಾ ಜ್ವರ ಏರಿ ಕಂಗೆಡಿಸುತ್ತದೆ'' ಎಂದಳು.

ಸಂನ್ಯಾಸಿ ನೀರು ಕುಡಿದ, ಧನ್ಯತಾಭಾವದಿಂದ 'ಶುಭವಾಗಲಿ' ಎಂದು ಹೇಳಿ ಮುಂದೆ ನಡೆದ. ಅವನಿಗೆ ಆ ಮಾತೆ ತನ್ನ ನೆರೆಮನೆಯವರೊಂದಿಗೆ ಹೇಳುತ್ತಿದ್ದುದು ಕೇಳಿಸಿತು, ''ಸಂನ್ಯಾಸ ವ್ರತ ತುಂಬ ಕಠಿಣವಾದ್ದು. ಅಯ್ಯೋ ಇವರ ತಾಯಿ ಪಾಪ ಎಷ್ಟು ದು:ಖಿತಳಾಗಿದ್ದಾಳೋ.. ಒಂದು ವೇಳೆ ಮರಣ ಹೊಂದಿದ್ದರೆ ಪರವಾಗಿಲ್ಲ. ತಾಯಿಗೆ ಆಗುವಷ್ಟು ಕಷ್ಟ ತಂದೆಗೆ ಆಗುವುದಿಲ್ಲ. ಅಯ್ಯೋ ಇವರು ಎಲ್ಲಿಯವರು ಎಂದೂ ಗೊತ್ತಿಲ್ಲ.. ಆದರೆ ಇವರ ತಾಯಿಯ ಬಗ್ಗೆ ನನಗಂತೂ ತುಂಬಾ ಕನಿಕರವಾಗುತ್ತಿದೆ.'' (ಸಂನ್ಯಾಸಿಯು ಆಗ ಯೌವನಾವಸ್ಥೆಯಲ್ಲಿದ್ದರು.)

ಹೃದಯದಲ್ಲಿ ಮಾನವತೆಯು ಉಕ್ಕುತ್ತಿದೆ! *

ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದ ಭಾಗ್ಯವಂತ ಭಾರತೀಯ ನಾರಿಯರು

# ಯಶೋದಾ ಮಾ (ಮೊನಿಕಾ ರಾಯ್)

**ಡಾ. ಶೈಲಜಾ ಆಮೂರ**

ಪರಿವ್ರಾಜಕ ಸಂನ್ಯಾಸಿ ಸ್ವಾಮಿ ವಿವೇಕಾನಂದರು ತಮ್ಮ ಭಾರತ ಪರ್ಯಟನೆಯ ಸಮಯದಲ್ಲಿ ೧೮೯೦ನೆಯ ಇಸವಿ, ಜನವರಿ ತಿಂಗಳಿನಲ್ಲಿ ಉತ್ತರ ಪ್ರದೇಶದ ಗಾಝಿಪುರಕ್ಕೆ ಹೋದರು. ಆ ವೇಳೆಯಲ್ಲಿ ಅವರು ಸತೀಶ ಮುಖ್ಯೋಪಾಧ್ಯಾಯ ಎನ್ನುವ ಒಬ್ಬ ಬಂಗಾಳಿ ಯುವಕನ ಮನೆಯಲ್ಲಿ ತಂಗಿದ್ದರು. ಗಾಝಿಪುರದಲ್ಲಿ ವಾಸಿಸುತ್ತಿದ್ದ ಹಿಂದೂ ತಪಸ್ವಿ ಹಾಗೂ ಸಂತರಾಗಿದ್ದ 'ಪವಾಹಾರಿ ಬಾಬಾ' ಎಂಬ ಯೋಗಿಯೊಬ್ಬರನ್ನು ಭೇಟಿಯಾಗುವ ಹಂಬಲದಿಂದ ಆವರು ಗಾಝಿಪುರದಲ್ಲಿ ಸುಮಾರು ದಿನಗಳ ಕಾಲ ನೆಲೆಸಿದರು. ಪವಾಹಾರಿ ಬಾಬಾ ಔನಪುರದ ಪ್ರೇಮಪುರದಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದರು. ಅವರ ಚಿಕ್ಕಪ್ಪನ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಲು ಗಾಝಿಪುರಕ್ಕೆ ಹೋದರು. ಅವರು ತಮ್ಮ ನಮ್ರತೆ, ಸಭ್ಯತೆ ಮತ್ತು ಕಲ್ಯಾಣಗುಣಗಳಿಂದ ಎಲ್ಲ ಜನರ ಮನಸ್ಸನ್ನು ಆಕರ್ಷಿಸಿದ್ದರು. ಸ್ವಾಮಿ ವಿವೇಕಾನಂದರು ಅಲ್ಲಿ ಇದ್ದಾಗ ಬಾಬಾರಿಗೆ ಯಾವ ಜನರನ್ನೂ ಭೇಟಿಯಾಗುವ ಇಷ್ಟವಿರಲಿಲ್ಲ. ಅವರನ್ನು ಭೇಟಿ ಮಾಡಲೇಬೇಕು ಎಂಬ ಉದ್ದೇಶವನ್ನು ಹೊಂದಿದ್ದ ಸ್ವಾಮೀಜಿ ಗಾಝಿಪುರದಲ್ಲಿ ಬಾಬಾರವರ ಆಶ್ರಮಕ್ಕೆ ಹತ್ತಿರವಿದ್ದ ಗಗನ ಚಂದ್ರರಾಯ್ ಎನ್ನುವ ಮಹಾನುಭಾವರ ವಿನಂತಿಯ ಮೇರೆಗೆ ಅವರ ಮನೆಗೆ ಹೋಗಿ ವಾಸಿಸತೊಡಗಿದರು. ಗಗನಚಂದ್ರ ಕೂಡ ಬಾಬಾರ ಭಕ್ತನಾಗಿದ್ದ. ಅವನು ತುಂಬ ಧಾರ್ಮಿಕ ಹಾಗೂ ಮೇಧಾವಿ ಬಂಗಾಳಿ ಯುವಕನಾಗಿದ್ದು ಗಾಝಿಪುರದ ಜನರ ಪ್ರೀತ್ಯಾದರಗಳಿಗೆ ಪಾತ್ರನಾಗಿದ್ದ. ಸಾಧು, ಸಂತರನ್ನು ಅತ್ಯಂತ ಭಕ್ತಿಯಿಂದ ಬರಮಾಡಿಕೊಂಡು, ಅವರ ಸನ್ನಿಧಾನದಲ್ಲಿ ಧಾರ್ಮಿಕ ಸಭೆಗಳನ್ನು ನಡೆಸುತ್ತಿದ್ದ. ಸ್ವಾಮಿ ವಿವೇಕಾನಂದರಿಂದ ತುಂಬ ಪ್ರಭಾವಿತನಾಗಿದ್ದ ಗಗನ ಚಂದ್ರ ಅವರ ಸನ್ನಿಧಾನದಲ್ಲಿ ಸತ್ಸಂಗಗಳನ್ನು ನಡೆಸುತ್ತಿದ್ದ. ಅವರ ನುಡಿಗಳಿಂದ, ಸಂಗೀತದಿಂದ ಬಹಳಷ್ಟು ಪ್ರಭಾವಿತರಾಗಿದ್ದ ಗಾಝಿಪುರದ ಜನ ಸ್ವಾಮಿ ವಿವೇಕಾನಂದರನ್ನು ಕೇಂದ್ರವಾಗಿರಿಸಿಕೊಂಡು ತಂಡೋಪತಂಡವಾಗಿ ಅವರಿದ್ದಲ್ಲಿಗೆ ಬರಲಾರಂಭಿಸಿದರು. ಪ್ರತಿದಿನ ಆನಂದದ ಉತ್ಸವವೇ ನೆರವೇರುತ್ತಿತ್ತು.

ಒಂದು ದಿನ ಬಹಳ ಜನ ಸೇರಿದ್ದ ಸಭೆಯಲ್ಲಿ ಸ್ವಾಮಿ ವಿವೇಕಾನಂದರು ಒಂಬತ್ತು ವರ್ಷ ವಯಸ್ಸಿನ ಪುಟ್ಟ ಹುಡುಗಿಯೊಬ್ಬಳನ್ನು ವಿಶೇಷವಾಗಿ ಗುರುತಿಸಿದರು. ಪ್ರತಿಭಾನ್ವಿತ ಕಂಗಳ ಈ ಸುಂದರ ಪುಟ್ಟ ಮಗು ಯಾರೆಂದು ಸ್ವಾಮೀಜಿ ಗಗನ ಚಂದ್ರನನ್ನು ಕೇಳಿದರು. ಆಗ ಗಗನಚಂದರ 'ಇವಳು ನನ್ನ ಮಗಳು ಮೊನಿಕಾ.



ಸ್ವಾಮೀಜಿ, ದಯವಿಟ್ಟು ಇವಳನ್ನು ಆಶೀರ್ವದಿಸಿ'' ಎಂದು ನುಡಿದ. ಸ್ವಾಮೀಜಿ ಮುಗುಳ್ನಗುತ್ತ, ''ನಿನ್ನ ಮಗಳಿಗೆ ನನ್ನ ಆಶೀರ್ವಾದ ಎಂದಿಗೂ ಇದೆ. ನಾನು ಈಗಾಗಲೇ ಅವಳನ್ನು ಆಶೀರ್ವದಿಸಿದ್ದೇನೆ. ಈಗ ಅವಳನ್ನು ದೇವಿಯ ರೂಪದಲ್ಲಿ, ಜಗನ್ಮಾತೆ ರೂಪದಲ್ಲಿ ಪೂಜಿಸಬಯಸುತ್ತೇನೆ'' ಎಂದರು. ಈ ಅನಿರೀಕ್ಷಿತ ಆಹ್ವಾನದಿಂದ ಗಗನಚಂದ್ರ ಸ್ತಂಭೀಭೂತನಾದ. ಸ್ವಾಮೀಜಿ ತಮ್ಮ ಮಾತುಗಳನ್ನು ಮುಂದುವರಿಸುತ್ತ, ''ನಿನ್ನ ಮಗಳು ಪರಿಶುದ್ಧಳು. ಅವಳನ್ನು ನೋಡುತ್ತಿದ್ದಂತೆಯೇ ಅವಳನ್ನು ದೇವಿಯಂತೆ ಪೂಜಿಸಬೇಕೆಂದು ನಿರ್ಧರಿಸಿದೆ. ನನ್ನ ಸಲುವಾಗಿ ದಯವಿಟ್ಟು ನೀನು ಈ ಜವಾಬ್ದಾರಿ ನಿಭಾಯಿಸುತ್ತಿಯಾ? ಕುಮಾರಿ ಪೂಜೆಗಾಗಿ ಸಿದ್ಧತೆ ಮಾಡಿಕೊಡುತ್ತೀಯಾ?'' ಎಂದು ವಿನಂತಿಸಿಕೊಂಡರು.

ಗಗನಚಂದ್ರನ ಆನಂದಕ್ಕೆ ಪಾರವೇ ಇಲ್ಲ. ಮರುದಿನವೇ ಒಂದು ಮಂಗಳಕರ ಸಮಯವನ್ನು ಗೊತ್ತುಪಡಿಸಿ ಪೂಜೆಗೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಿದ. ಸ್ವಾಮೀಜಿಯವರ ಮನಸ್ಸು ಉನ್ನತ ಸ್ತರದಲ್ಲಿ ನೆಲೆಸಿತ್ತು. ಪೂಜಾಕಾರ್ಯವನ್ನು